**ದಿನಾಂಕ:12-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಸಿ.ಪಿ. ರವರಿಂದಃ-**

ನಿಪಿ.8 ನ್ನು ನಾನೇ ಹಾಜರುಪಡಿಸಿದ್ದೇನೆ. ಅದರಲ್ಲಿ ನಿಮ್ಮ ಅಜ್ಜ ಬಸವಂತಪ್ಪ ರವರು ನಾನು ನನ್ನ ಸಂಪೂರ್ಣ ಮಾಲ್ಕೀಯ ಹಾಗೂ ವಹಿವಾಟಿಯ ಎಂದರೆ ಮೆಃ ಅಸಿಸ್ಟೆಂಟ್ ಕಮೀಷನರ್, ಸಾಃ ಬೆಳಗಾವಿ ಇವರ ಕಡೆಯ W.T.N.S.R.VIII-4057 ನಿನ ಹುಕ್ಕುಂನಂತೆ ರೈತಾವ ಆದಂತಹ ಕೆಳಗಿನ ಜಮೀನು ಸಂತೋಷದಿಂದ ಖರೀದಿ ಕೊಟ್ಟಿರುತ್ತೇನೆಂದು ಬರೆದಿರುತ್ತಾರೆ ಎಂದರೆ ಸರಿ. ಒಂದು ನೊಂದಾಯಿತ ದಾಖಲೆ ಆಗಬೇಕಾದರೆ ಅದಕ್ಕೆ ಸಂಬಂಧಿಸಿದ ಪಕ್ಷಗಾರರು ನೊಂದಣಾಧಿಕಾರಿಗಳ ಕಛೇರಿಗೆ ಹೋಗಿ ಅವರು ದಾಖಲೆಗಳಿಗೆ ಸಹಿ ಮಾಡಿದ ನಂತರ ನೊಂದಣಾಧಿಕಾರಿಗಳು ಮುದ್ರೆ ಹಾಕಿ ಸಹಿ ಮಾಡಿದ ನಂತರ ಆ ದಾಖಲೆಯನ್ನು ನೊಂದಣಿ ಮಾಡಲಾಗುತ್ತದೆ ಎಂದರೆ ಸಾಕ್ಷಿ ನನ್ನ ತಂದೆ, ನನ್ನ ಅಜ್ಜಿಯ ಸಹಿಗಳನ್ನು ಆ ದಾಖಲೆಗಳಿಗೆ ಪಡೆದಿರುತ್ತಾರೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಕುಟುಂಬದ ಎಲ್ಲರ ಸಮ್ಮತಿಯನ್ನು ಪಡೆದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ದಿನಾಂಕ 31.10.1969 ರ ನೊಂದಾಯಿತ ಖರೀದಿ ಪತ್ರವನ್ನು ತೋರಿಸಿ ಈ ದಾಖಲೆಯಂತೆ ನಿಮ್ಮ ಅಜ್ಜನೇ ಖರೀದಿಗೆ ಕೊಟ್ಟು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ಅಜ್ಜ ಮೋಡಿಯಲ್ಲಿ ಸಹಿ ಮಾಡುತ್ತಿದ್ದರು , ಆದರೆ ಈ ದಾಖಲೆಯಲ್ಲಿ ಹೆಬ್ಬೆಟ್ಟಿನ ಸಹಿ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಆ ಖರೀದಿ ಪತ್ರಕ್ಕೆ ನಿಮ್ಮ ಅಜ್ಜನವರು ಹೆಬ್ಬೆಟ್ಟಿನ ಸಹಿ ಮಾಡಿಲ್ಲ, ಅವರು ಸುಶಿಕ್ಷಿತರಾದ ಕಾರಣ ತಮ್ಮ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಖರೀದಿ ಪತ್ರದಲ್ಲಿ ಎಸ್ .ಎಂ.ಕೋಲ್ಕಾರ್ ಎಂದು ಮಾಡಿದ್ದಾರೆ, ಆದರೆ ನನ್ನ ಅಜ್ಜ

ಮೋಡಿಯಲ್ಲಿ ಸಹಿ ಮಾಡುತ್ತಿದ್ದರು ಎನ್ನುತ್ತಾರೆ. ಸದರಿ ಖರೀದಿ ಪತ್ರವಾದಾಗ ನಿಮ್ಮ ತಂದೆ ತಾಯಿ ರವರ ಮದುವೆ ಆಗಿರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ತಾಯಿ ಮದುವೆಯಾದ ದಿನಾಂಕ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹುಟ್ಟುವ 10-12 ವರ್ಷಗಳ ಮೊದಲು ನನ್ನ ತಂದೆ ತಾಯಿಗೆ ಮದುವೆ ಆಗಿತ್ತು. ನನ್ನ ತಂದೆ ತಾಯಿಗೆ ನಾನು ಎರಡನೇ ಮಗ. ನಾನು 10 ನೇ ತರಗತಿವರೆಗೆ ಓದಿದ್ದೇನೆ.

**2.** ನೀವಾಗಲೀ ನಿಮ್ಮ ತಂದೆಯಾಗಲೀ ಅಥವಾ ನಿಮ್ಮ ಅಜ್ಜನಾಗಲೀ ಪ್ರತಿವಾದಿಗಳ ಪರ ಆದ ಖರೀದಿ ಪತ್ರವನ್ನು ರದ್ದುಗೊಳಿಸುವಂತೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 1969 ರಲ್ಲಿ ಆದ ಡೈರಿಯನ್ನು ರದ್ದುಗೊಳಿಸುವಂತೆ ಕೇಳಿ ತಹಶೀಲ್ದಾರ್ ಕಛೇರಿಯಲ್ಲಾಗಲೀ ಅಥವಾ ಅಸಿಸ್ಟೆಂಟ್ ಕಮೀಷನರ್ ಕಛೇರಿಯಲ್ಲಾಗಲೀ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಪಹಣಿಗಳಲ್ಲಿ 1969 ರಿಂದ ಇಲ್ಲಿಯವರೆಗೆ ಮಾಲೀಕರ ಕಾಲಂ ನಲ್ಲಿ ಪ್ರತಿವಾದಿಯರ ಅಜ್ಜನ ಹೆಸರು, ಅವರ ಮರಣಾನಂತರ ಪ್ರತಿವಾದಿಯರ ತಂದೆ ಹೆಸರು ಮತ್ತು ಅವರ ಮರಣಾನಂತರ ಪ್ರತಿವಾದಿಗಳ ಹೆಸರು ನಮೂದಾಗುತ್ತಾ ಬಂದಿದೆ ಎಂದರೆ ಸಾಕ್ಷಿ ಪ್ರತಿವಾದಿಗಳು ಆ ರೀತಿಯಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ಉತಾರದಲ್ಲಿನ ಪ್ರತಿವಾದಿಗಳ ಹೆಸರನ್ನು ಕಡಿಮೆ ಮಾಡಲು ಎಲ್ಲಿಯಾದರೂ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾರು ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದಾರೆ ಎಂದು ತಿಳಿಯಲು ನ್ಯಾಯಾಲಯದಿಂದ ಕೋರ್ಟ್ ಕಮೀಷನರ್ ರವರನ್ನು ನೇಮಕ ಮಾಡಲು ನಿಮ್ಮದು ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿ ಮಾಡಬಹುದು ಎನ್ನುತ್ತಾರೆ.

ಸಾಕ್ಷಿಗೆ 3 ಪೋಟೋಗಳನ್ನು ತೋರಿಸಿ ಅವುಗಳಲ್ಲಿ ಕಾಣುವ ಜಮೀನು ದಾವಾ ಜಮೀನು ಎಂದರೆ ಸಾಕ್ಷಿ ಪೋಟೋಗಳನ್ನು ನೋಡಿ ದಾವಾ ಜಮೀನು ಹೌದೋ ಅಲ್ಲವೋ ಎಂದು ಹೇಳಲಾಗುವುದಿಲ್ಲ ಎನ್ನುತ್ತಾರೆ.

**3.** ದಾವಾ ಸ್ವತ್ತಿನ ಅಕ್ಕ ಪಕ್ಕದ ಜಮೀನಿನ ಮಾಲೀಕರಿಂದ ಕಬ್ಜೆಯ ಬಗ್ಗೆ ಸಾಕ್ಷಿ ನುಡಿಸುತ್ತೀರಾ ಎಂದರೆ ಸಾಕ್ಷಿ ಪ್ರತಿವಾದಿಗಳು ತಮ್ಮ ಹೆಸರನ್ನು ಉತಾರದಲ್ಲಿ ಹಚ್ಚಿಕೊಂಡಿರುವುದರಿಂದ ನಾವು ಅಕ್ಕ ಪಕ್ಕದ ಮಾಲೀಕರಿಗೆ ಸಾಕ್ಷ್ಯ ನುಡಿಯಲು ಕರೆಸಿದರೆ ಅವರು ಪ್ರತಿವಾದಿಗಳೇ ಕಬ್ಜೆಯಲ್ಲಿದ್ದಾರೆ ಎಂದು ನುಡಿಯುತ್ತಾರೆ ಎನ್ನುತ್ತಾರೆ. ಪ್ರತಿವಾದಿಗಳೇ ದಾವಾ ಸ್ವತ್ತಿನ ಉಳುಮೆಯನ್ನು ಮಾಲೀಕ ಮತ್ತು ಕಬ್ಜೆದಾರನಾತೆಯಿಂದ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆಯ ಮರಣಾನಂತರ ನಾವು ಉಳುಮೆ ಮಾಡುತ್ತಿಲ್ಲ, ಈಗ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ನಿವೇಶನಗಳನ್ನು ಮಾಡಿ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ, ಆದ್ದರಿಂದ ನಾನು ಪ್ರತಿವಾದಿಗಳ ವಿರುದ್ಧ ದಾವೆ ಹೂಡಿದ್ದೇನೆ ಎನ್ನುತ್ತಾರೆ. ಸಾಕ್ಷಿಗೆ ಪೋಟೋ ತೋರಿಸಿ ಅದರಲ್ಲಿ ಕಾಣುವ ಜಮೀನು ದಾವಾ ಜಮೀನು ಎಂದರೆ ಸಾಕ್ಷಿ ಅಲ್ಲ ಎನ್ನುತ್ತಾರೆ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಭತ್ತ ಬೆಳೆಯುತ್ತಾರೆ ಎಂದರೆ ಸಾಕ್ಷಿ ನಾವೇ ಕಬ್ಜೆಯಲ್ಲಿದ್ದು ನಾವೇ ಭತ್ತದ ಬೆಳೆ ಬೆಳೆಯುತ್ತೇವೆ ಎನ್ನುತ್ತಾರೆ. 50 ವರ್ಷಗಳ ಹಿಂದೆ ಬಸವಂತಪ್ಪ ರವರು ದಾವಾ ಜಮೀನನ್ನು ಪ್ರತಿವಾದಿಗಳ ಪೂರ್ವಜರಿಗೆ ಮಾರಾಟ ಮಾಡಿದ್ದು, ಆವಾಗಿನಿಂದಲೂ ಪ್ರತಿವಾದಿಗಳೇ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದು ದಾವೆ ಹೂಡಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ .

ಯಾವ ವರ್ಷದಲ್ಲಿ ನಿಮಗೆ 18 ವರ್ಷ ವಯಸ್ಸು ತುಂಬಿತ್ತು ಎಂದರೆ ಸಾಕ್ಷಿ 20 ವರ್ಷಗಳ ಹಿಂದೆ ನನಗೆ 18 ವರ್ಷ ತುಂಬಿತ್ತು ಎನ್ನುತ್ತಾರೆ.

**4.** ನಿಪಿ-1 ರಿಂದ 5 ರ ಪ್ರಕಾರ ಪ್ರತಿವಾದಿಗಳೇ ಮಾಲೀಕರೆಂದು ತೋರಿಸಲಾಗಿದೆ ಎಂದರೆ ಸಾಕ್ಷಿ ಸುಳ್ಳು ಕಾಗದ ಪತ್ರಗಳನ್ನು ತಯಾರಿಸಿಕೊಂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಗಳು ಸುಳ್ಳು ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಡೈರಿ ನಂ.2097 ರಿಂದ 2099 ರಲ್ಲಿ ಕರೆವ್ವ ಮತ್ತು ಕಾಶವ್ವ ರವರಿಗೆ ಯಾವ ರೀತಿ ಆಸ್ತಿ ಹೋಯಿತು ಎಂಬುದವರ ಬಗ್ಗೆ ನಮೂದಾಗಿದೆ ಎಂದರೆ ಸರಿ. ಡೈರಿ ನಂ.2198 ರಲ್ಲಿ ನಿಮ್ಮ ಅಜ್ಜನವರು ಪ್ರತಿವಾದಿಗಳ ಅಜ್ಜನವರಿಗೆ ಮಾರಾಟ ಮಾಡಿದ ಬಗ್ಗೆ ನಮೂದಾಗಿದೆ ಎಂದರೆ ಸರಿ. ಡೈರಿ ನಂ.2220 ರಲ್ಲಿ ಪ್ರತಿವಾದಿಗಳ ಅಜ್ಜ ಬಸವಂತಪ್ಪ ಮೃತರಾದ ನಂತರ ಪ್ರತಿವಾದಿಗಳ ತಂದೆಯವರ ಹೆಸರಿನಲ್ಲಿ ವಾರಸನಾತೆಯಿಂದ ದಾವಾ ಆಸ್ತಿ ನಮೂದಾದ ಬಗ್ಗೆ ಬರೆಯಲಾಗಿದೆ ಎಂದರೆ ಸಾಕ್ಷಿ ದಾವಾ ಸ್ವತ್ತಿಗೆ ಸಂಬಂಧಿಸಿದ ಡೈರಿ ಉತಾರವನ್ನು ನಾನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಡೈರಿ ನಂ.2461 ರಲ್ಲಿ ದಾವಾ ಸ್ವತ್ತು ನಜರಚುಕ್ಕೆಯಿಂದ ತಪ್ಪಾಗಿ ನಮೂದಾಗಿತ್ತು, ಆದ್ದರಿಂದ ಪ್ರತಿವಾದಿಗಳು ಅದನ್ನು ಸರಿಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 17.02.2022 ರಂದು ಡೈರಿ ನಂ.2461 ರದ್ದಾಗಿ ದಾವಾ ಸ್ವತ್ತನ್ನು ರೈತಾವ ಜಮೀನಾಗಿ ಆದೇಶಿಸಲಾಯಿತು ಎಂದರೆ ಸಾಕ್ಷಿ ಪ್ರತಿವಾದಿಗಳು ಈಗ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ನಿಪಿ-1 ರಿಂದ 7 ದಾಖಲೆಗಳು ನಾನು ಹುಟ್ಟುವ ಮೊದಲಿನ ದಾಖಲೆಗಳು ಎಂದರೆ ಸರಿ. 1969 ರಿಂದ

ಇಲ್ಲಿಯವರೆಗೆ ದಾವಾ ಸ್ವತ್ತಿನ ಪಟ್ಟಾ ಪುಸ್ತಕ ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಅವರು ಆ ರೀತಿ ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ.

**5.** ನಾನು ಸಿದ್ದರಾಯಿ ರವರ ವಾರಸುದಾರ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ನನ್ನ ತಂದೆಯ ಮರಣ ಉತಾರವನ್ನು ಮತ್ತು ನನ್ನ ಚಿಕ್ಕಪ್ಪನ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತನ್ನು 50 ವರ್ಷಗಳ ಹಿಂದೆ ಮಾರಾಟ ಮಾಡಿದ್ದರಿಂದ ದಾವೆ ಸಲ್ಲಿಸಲು ನಿಮಗೆ ಕಾಲಪರಿಮಿತಿಯ ಅವಧಿಯು ಇರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮಾರಾಟ ಮಾಡಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿಯೂ ಸಹ ಪ್ರತಿವಾದಿಗಳ ಜಮೀನುಗಳು ಇವೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದಾವಾ ಸ್ವತ್ತಿನ ಮೌಲ್ಯ ಹೆಚ್ಚಾಗಿರುವುದರಿಂದ ನಾನು ಅವರಿಂದ ಹೆಚ್ಚು ಹಣ ಪಡೆಯಲು ಹಲವಾರು ಬಾರಿ ಪ್ರಯತ್ನಿಸಿ ನಂತರ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ದಾವಾ ಸ್ವತ್ತು ನಮ್ಮದೇ ಇರುವಾಗ ನಾನು ಪ್ರತಿವಾದಿಗಳನ್ನು ಏಕೆ ಕೇಳಲಿ ಎನ್ನುತ್ತಾರೆ. ಪ್ರತಿವಾದಿಗಳಿಂದ ಹಣ ವಸೂಲಿ ಮಾಡಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**6.** ನೀವು ದಾವಾ ಜಮೀನನ್ನು ಉಳುಮೆ ಮಾಡುತ್ತಿದ್ದಾಗ ಪ್ರತಿವಾದಿಗಳು ನಿಮಗೆ ಅಡ್ಡಿ ಪಡಿಸಿದ್ದರು ಎಂದು ವಾದ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನೇ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ

ಅಜ್ಜನ ಕಾಲದಿಂದಲೂ ಅವರೇ ಮಾಲ್ಕೀನಾತೆಯಿಂದ ದಾವಾ ಸ್ವತ್ತಿನ ಕಬ್ಜೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಒಕ್ಕಲುತನ ಮತ್ತು ಗೌಂಡಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಹಿರಿಯರೊಂದಿಗೆ ಪ್ರತಿವಾದಿಗಳನ್ನು ದಾವಾ ಸ್ವತ್ತಿನ ಬಗ್ಗೆ ಕೇಳಲು ಹೋಗಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**